

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# 'ಸೀತೆ'ಯರ ಮೂಕವೇದನೆ

'ಅಯ್ಯೋ, ನಾನು ಹೆಣ್ಣಾಗಿ ಹುಟ್ಟಿದ್ದೇ ತಪ್ಪಾಯ್ತು': ಇದು ಅನೇಕ ಮಹಿಳೆಯರ ಬಾಯಿಂದ ಇಂದು ಕೇಳಿಬರುವ ವೇದನೆಯ ಉದ್ಗಾರ! ಇದನ್ನು ಪುಷ್ಟೀಕರಿಸುವ ಜನಪದ ಗೀತೆಯೊಂದು ಹೀಗಿದೆ:

**ಹೆಣ್ಣಾಗಿ ಹುಟ್ಟೋಕಿಂತ ಮಣ್ಣಾಗಿ ಹುಟ್ಟದರೆ**
**ಮಣ್ಣ ಮೇಲೊಂದು ಮರನಾಗಿ । ಹುಟ್ಟದರೆ**
**ಪುಣ್ಯವಂತರಿಗೆ ನೆರಳಾಗಿ!**

ಸಾಂಸಾರಿಕ ಜೀವನದ ಬಿಸಿಲ ಬೇಗೆಯಿಂದ ದಣಿದ ಹೆಣ್ಣಿನ ಮನಸ್ಸಿನ ಇಂತಹ ಉದ್ಗಾರ ನಿನ್ನೆ ಮೊನ್ನೆಯದಲ್ಲ; ರಾಮಾಯಣದ ಕಾಲದಿಂದಲೂ ಇದೆ. ಲೋಕಾಪವಾದಕ್ಕೆ ಅಂಜಿ ಶ್ರೀರಾಮನು ನಿನ್ನನ್ನು ಕಾಡಿನಲ್ಲಿ ಬಿಟ್ಟುಬರಲು ಆಜ್ಞಾಪಿಸಿದ್ದಾನೆಂದು ಲಕ್ಷ್ಮಣ ಹೇಳಿದಾಗ ಬಿರುಗಾಳಿಗೆ ತತ್ತರಿಸಿ ಬಿದ್ದ ಹಣ್ಣಾದ ಗೊನೆವಾಳೆಯಂತೆ ಸೀತೆ ಧರೆಗೆ ಉರುಳಿಬೀಳುತ್ತಾಳೆ (ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದಿಳೆಗೊರಗುವಂತೆ - ಜೈಮಿನಿ ಭಾರತ). ಸ್ವಲ್ಪ ಹೊತ್ತಿನ ಮೇಲೆ ಎಚ್ಚರಗೊಂಡು 'ಅಯ್ಯೋ, ಆ ಬ್ರಹ್ಮನು ನನ್ನ ಈ ಶರೀರವನ್ನು ದುಃಖಿಸಲೆಂದೇ ಸೃಷ್ಟಿಸಿರುವಂತೆ ತೋರುತ್ತದೆ' ಎಂದು ದುಃಖಿಸುತ್ತಾಳೆ (ಮಾಮಿಕೇಯಂ ತನುರ್ನೂನಂ ಸೃಷ್ಟಾ ದುಃಖಾಯ ಲಕ್ಷ್ಮಣ - ವಾಲ್ಮೀಕಿ ರಾಮಾಯಣ). 'ರಾಜ್ಯಲಕ್ಷ್ಮಿಗೆ ನನ್ನನ್ನು ಕಂಡರೆ ಅಸೂಯೆ ಎಂದು ತೋರುತ್ತದೆ. ಆಕೆಯನ್ನು ತೊರೆದು ನೀನು ನನ್ನೊಂದಿಗೆ ಕಾಡಿಗೆ ಹೋದೆ. ಈಗ ಹಿಂತಿರುಗಿ ಬಂದ ಮೇಲೆ ನನ್ನ ಮೇಲಿನ ಸಿಟ್ಟಿನಿಂದ ಆಕೆ ನನ್ನನ್ನು ಕಾಡಿಗೆ ಅಟ್ಟುವಂತೆ ಮಾಡಿರಬಹುದು' ಎಂದು ತರ್ಕಿಸುತ್ತಾಳೆ (ಉಪಸ್ಥಿತಾಂ ಪೂರ್ವಮಪಾಸ್ಯ ಲಕ್ಷ್ಮೀಂ ವನಂ ಮಯಾ ಸಾರ್ಧಮಸಿ ಪ್ರಪನ್ನಃ / ತದಾಸ್ಪದಂ ಪ್ರಾಪ್ಯ ತಯಾತಿರೋಷಾತ್ ಸೋಢಾಽಸ್ಮಿ ನ ತ್ವದ್ಭವನೇ ವಸಂತೀ - ಕಾಳಿದಾಸನ ರಘುವಂಶ). 'ನನ್ನ ಪತಿಯ ವಂಶದ ಕುಡಿ ಉದರದೊಳಗೆ ಇಲ್ಲದೇ ಹೋಗಿದ್ದರೆ ಗಂಗಾನದಿಯನ್ನು ದಾಟಿಬರುವಾಗಲೇ ನೀರಿನಲ್ಲಿ ಮುಳುಗಿ ಪ್ರಾಣಕಳೆದುಕೊಳ್ಳುತ್ತಿದ್ದೆ' ಎಂದು ರೋದಿಸುತ್ತಾಳೆ. ಮೂಲ ರಾಮಾಯಣ ಮತ್ತು ಅದನ್ನು ಆಧರಿಸಿ ಬರೆದ ಎಲ್ಲ ಸಾಹಿತ್ಯಗ್ರಂಥಗಳಲ್ಲಿ ಬರುವ ಸೀತೆಯ ಈ ಮನಮಿಡಿಯುವ ಮಾತುಗಳು ಈಗಲೂ ಅನೇಕ ಮಹಿಳೆಯರ ಬಾಯಲ್ಲಿ ಜೀವಂತವಾಗಿ ಉಳಿದಿವೆ.

ಪಿತೃವಾಕ್ಯ ಪರಿಪಾಲನೆಗಾಗಿ ಕಾಡಿಗೆ ಹೋದ ರಾಮ ಜನರ ಪ್ರಶಂಸೆಗೆ ಪಾತ್ರನಾಗಿದ್ದ. ಆದರೆ ಅಯೋಧ್ಯೆಗೆ ಹಿಂತಿರುಗಿದ ಮೇಲೆ ಬಹುಕಾಲ ರಾವಣನ ವಶದಲ್ಲಿದ್ದ ಸೀತೆಯನ್ನು ಜೊತೆಯಲ್ಲಿ ಕರೆದುಕೊಂಡು ಬಂದದ್ದು ಕೆಲವು ಜನರಿಗೆ ಇಷ್ಟವಾಗಲಿಲ್ಲ. ಈ ಲೋಕಾಪವಾದದ ಹಿನ್ನೆಲೆಯಲ್ಲಿ ಸೀತೆಯನ್ನು ಕಾಡಿಗೆ ಕಳಿಸಲು ರಾಮನು ತೆಗೆದುಕೊಂಡ ಕಠಿಣ ನಿರ್ಧಾರ ಸೀತೆಯ ಪತಿಯಾಗಿ ತೆಗೆದುಕೊಂಡದ್ದಲ್ಲ; ಅಯೋಧ್ಯೆಯ ರಾಜನಾಗಿ ತೆಗೆದುಕೊಂಡದ್ದು. ಅವನು ವೈಯಕ್ತಿಕ ಸುಖವನ್ನು ತ್ಯಾಗಮಾಡಿ ತುಂಬುಗರ್ಭಿಣಿಯಾದ ಸೀತೆಯನ್ನು ಕಾಡಿಗೆ ಕಳುಹಿಸಿದ ಈ ದಾರುಣ ಪ್ರಸಂಗವು ಪ್ರಜೆಗಳ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲವೆ? ಅವರ ಮನಸ್ಸು ಕರಗಲಿಲ್ಲವೆ? ಯಾರೋ ಕೆಲವರು ಅಪವಾದವನ್ನು ಹೊರಿಸಿ ಮಾತನಾಡಿರುವ ವಿವರಗಳು ರಾಮಾಯಣದಲ್ಲಿ ದೊರೆಯುತ್ತವೆ. ಆದರೆ ಈ ಲೋಕಾಪವಾದದ ಹಿನ್ನೆಲೆಯಲ್ಲಿ ಶ್ರೀರಾಮನು ತುಂಬು ಗರ್ಭಿಣಿ ಸೀತೆಯನ್ನು ಕಾಡಿಗೆ ಅಟ್ಟಿದ ಕಠಿಣ ಕ್ರಮದ ಬಗ್ಗೆ ಜನರು ಏನು ಮಾತನಾಡಿದರೆಂಬ ವರ್ಣನೆ ಮೂಲ ರಾಮಾಯಣದಲ್ಲಿ ಎಲ್ಲೂ ಇಲ್ಲ. ಯಾಕೆ? ವಾಲ್ಮೀಕಿಯ ಆಶ್ರಮದಲ್ಲಿ ಆಕೆ ಇದ್ದು, ಲವಕುಶರೆಂಬ ಅವಳಿ ಮಕ್ಕಳನ್ನು ಹೆತ್ತು, ಅವರು ದೊಡ್ಡವರಾಗಿ ಶ್ರೀರಾಮನ ಅಶ್ವಮೇಧಯಾಗದ ಕುದುರೆಯನ್ನು ಕಟ್ಟಿಹಾಕುವವರೆಗಿನ ಅವಧಿ ಏನಿಲ್ಲವೆಂದರೂ ಹತ್ತಾರು ವರ್ಷಗಳಾದರೂ ಆಗಿರಬಹುದು. ಅಲ್ಲಿಯವರೆಗೆ ಜನರ ಪ್ರತಿಕ್ರಿಯೆ ಏನೆಂಬುದು ರಾಮಾಯಣದಲ್ಲಿ ಎಲ್ಲೂ ಇಲ್ಲ. ಮಹರ್ಷಿ ವಾಲ್ಮೀಕಿ ತಮ್ಮ ಆಶ್ರಮದಲ್ಲಿ ಸೀತೆಗೆ ಆಶ್ರಯ ನೀಡಿದ್ದರೂ ಲವಕುಶರು ಹುಟ್ಟಿ ಬೆಳೆದು ದೊಡ್ಡವರಾಗುವವರೆಗೂ ಶ್ರೀರಾಮನ ಹತ್ತಿರ ಹೋಗಿ ತಿಳಿಹೇಳುವ ಪ್ರಯತ್ನ ಮಾಡುವುದಿಲ್ಲ. ಅದು ಹೋಗಲಿ, ಸೀತೆಯ ತವರು ಮನೆಯವರಾದರೂ ಆಕೆ ಏನಾದಳೆಂದು ವಿಚಾರಿಸುವ ಗೋಜಿಗೇ ಹೋಗುವುದಿಲ್ಲ. ರಾಜಮಾತೆಯರಾದ ಕೌಸಲ್ಯಾ, ಸುಮಿತ್ರಾ, ಕೈಕೇಯಿಯರಾಗಲೀ ಈ ಕಡೆಗೆ ಲಕ್ಷ್ಯ ವಹಿಸಿದಂತೆ ಕಾಣುವುದಿಲ್ಲ. ರಾಮನ ತಮ್ಮಂದಿರಾದ ಲಕ್ಷ್ಮಣ, ಭರತ ಶತ್ರುಘ್ನರಾಗಲೀ, ಅವರ ಹೆಂಡತಿಯರಾಗಲೀ ಯಾರೂ ತುಟಿಪಿಟಿಕ್ ಎನ್ನದೆ ಮೌನವಹಿಸಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ.

ರಾಮನ ವಿರುದ್ಧ ಸೀತೆ ಎಲ್ಲಿಯೂ ದನಿ ಎತ್ತಿಲ್ಲ. ಸೀತೆಯ ಮೌನವೇದನೆ ಸರಿಯಲ್ಲ ಎಂದು ಆಧುನಿಕ ಮಹಿಳೆಯರು ವಾದಿಸಬಹುದು. ಆದರೆ ವೈಯಕ್ತಿಕ ವಿಚಾರಗಳಿಗಾಗಿ ಮಾತಿಗೆ ಮಾತು ಬೆಳೆದು, ಪರಸ್ಪರರಲ್ಲಿ ವೈಯಕ್ತಿಕ ನೆಲೆಗಟ್ಟಿನ ಮೇಲೆ ಕಲಹಗಳು ನಡೆದು, ಸಂಶಯದ ಹುತ್ತಗಳು ಬೆಳೆದು ಮುರಿದುಬಿದ್ದ ದಾಂಪತ್ಯ ಅವರದಲ್ಲ. ಪ್ರೀತಿಯ ಗಂಡನಾದ ರಾಮನಿಂದ ತನಗೆ ಅನ್ಯಾಯವಾಗಿಲ್ಲವೆಂಬುದು ಅವಳಿಗೆ ಗೊತ್ತು, ತನ್ನನ್ನು ಸಂಶಯಿಸಿದ ಸಮಾಜದ ಬಗೆಗೆ ಅವಳಿಗೆ ಹೇಸಿಗೆ ಬಂದಿರಬಹುದು. ಎಷ್ಟುಬಾರಿ ಅಗ್ನಿಪ್ರವೇಶ ಮಾಡಿದರೂ ಸಮಾಜದ ಸಂದೇಹ ನಿವಾರಣೆ ಸಾಧ್ಯವಿಲ್ಲವೆಂಬ ನಿರ್ಧಾರ ಮಾಡಿಯೇ ಆಕೆ ಕೊನೆಯಲ್ಲಿ ಭೂಮಾತೆಯ ಒಡಲನ್ನು ಸೇರುತ್ತಾಳೆ. 'ನನ್ನ ಕಾರಣದಿಂದ ರಾಮನಿಗೆ ಅಪಕೀರ್ತಿ ಬಂದಿದೆ. ಅದನ್ನು ನಾನೇ ನಿವಾರಿಸಬೇಕು' ಎಂದುಕೊಂಡ ಆಕೆ ಆ ರೀತಿ ಮಾಡಿ

ಸಮಾಜಕ್ಕೆ ಪಾಠ ಕಲಿಸಿದಳೆಂದು ತೋರುತ್ತದೆ. ಆದರೆ ಸಮಾಜವು ಪಾಠ ಕಲಿಯಿತೇ ಎಂಬುದು ಪ್ರಶ್ನಾರ್ಹವಾಗಿದೆ. ಸೀತಾರಾಮರನ್ನು ಆದರ್ಶ ದಂಪತಿಗಳಾಗಿ ಕಂಡು ಪೂಜಿಸಿದ ಸಮಾಜವು ಅವರಿಬ್ಬರ ಬದುಕಿನ ಹಕ್ಕನ್ನೇ ನುಂಗಿ ನೊಣೆಯಿತು!

ಈಗಲೂ ಗಂಡಂದಿರಿಂದ ತಿರಸ್ಕೃತರಾಗಿ ಕಾಡು ಸೇರುವ (ಕಾಡುಗಳಾದರೂ ಈಗ ಎಲ್ಲಿವೆ!) ಅಂದರೆ ಅನಾಥರಾಗುವ 'ಸೀತೆ'ಯರಿಗೆ ಬರವಿಲ್ಲ. ಸೀತೆಗಾದರೋ ವಾಲ್ಮೀಕಿಯ ಆಶ್ರಯ ದೊರೆಯಿತು: ಅಂತಹ ಭಾಗ್ಯವೂ ಇಂದಿನ ಅಸಂಖ್ಯಾತ 'ಸೀತೆ'ಯರ ಪಾಲಿಗಿಲ್ಲ. ಗಂಡನ ಆಶ್ರಯವೂ ಇಲ್ಲದೆ ತವರಿನ ಬೆಂಬಲವೂ ಇಲ್ಲದೆ ಅನಾಥರಾಗಿ ಬಾಳು ಸವೆಸುವ ಅಬಲೆಯರು ಕರುಳ ಕುಡಿಗಳನ್ನು ಪೊರೆಯಲು ಮಾತ್ರ ಜೀವ ಹಿಡಿದುಕೊಂಡಿರುತ್ತಾರೆ. ಏನೇ ಆದರೂ ಏಕಪತ್ನೀವ್ರತಸ್ಥನಾಗಿಯೇ ಇದ್ದ ರಾಮನಂಥ ಗಂಡಂದಿರು ಮಾತ್ರ ಈಗ ಅಪರೂಪ.

ಪ್ರತಿ ಸೋಮವಾರ ನಡೆಯುವ ನಮ್ಮ 'ಸದ್ಧರ್ಮ ನ್ಯಾಯಪೀಠ'ದ ಮುಂದೆ ಗಂಡ ಹೆಂಡತಿಯರ ನಡುವಿನ ವಿರಸದ ಮೊಕದ್ದಮೆಗಳು ಬರುತ್ತಲೇ ಇರುತ್ತವೆ. "ಗಂಡನಿಂದ ದೂರಾಗಿ ಅನುಭವಿಸುತ್ತಿರುವ ನೋವು ನನಗಷ್ಟೇ ಸಾಕು; ತಂದೆಯಿಂದ ದೂರಾದ ಕರಾಳ ಅನುಭವ ನನ್ನ ಮಕ್ಕಳಿಗಷ್ಟೇ ಸಾಕು" ಎಂದು ಪರಿತಪಿಸುತ್ತಿರುವ ಮಹಿಳೆಯರ ಕೊರಗನ್ನು ಕೇಳುವವರಾರು? ಅವರ ಮದುವೆಗೆ ಹೋಗಿ ಅಕ್ಷತೆ ಹಾಕಿ ಆಶೀರ್ವದಿಸಿ, ಭೂರಿ ಭೋಜನವನ್ನು ಸವಿದು, ಫಲತಾಂಬೂಲ ಸ್ವೀಕರಿಸಿದ ಬಂಧು ಬಾಂಧವರು, ಇಷ್ಟಮಿತ್ರರು ತಪ್ಪುದಾರಿಯಲ್ಲಿ ನಡೆದವರ ಕೊರಳಪಟ್ಟಿ ಹಿಡಿದು ಕೆನ್ನೆಗೆ ಹೊಡೆದು ಏಕೆ ಬುದ್ಧಿ ಕಲಿಸುವುದಿಲ್ಲ? ಹಾಗೆ ಮಾಡದಿರುವುದು ಸಮಾಜದ ಹೊಣೆಗೇಡಿತನವಲ್ಲವೆ! ಈ ಸಾಮಾಜಿಕ ಹೊಣೆಗೇಡಿತನ ಇಂದಿನದಷ್ಟೇ ಅಲ್ಲ, ರಾಮಾಯಣ ಕಾಲದಿಂದಲೂ ಹೀಗೆ ನಡೆದುಕೊಂಡೇ ಬಂದಿದೆ. ಸೀತೆ ಸಮಾಜದ ವಿರುದ್ಧ ಸಿಡಿದೇಳದೆ ಮೌನವಾಗಿ ತುಟಿ ಕಚ್ಚಿಕೊಂಡೇ ಕಷ್ಟ ನಿಷ್ಠುರಗಳನ್ನು ಹೊತ್ತು ನಿತ್ತರಿಸಿದಳು! ಇಂದಿನ 'ಸೀತೆ'ಯರ ಮುಂದೆ ಅನ್ಯ ಆಯ್ಕೆಗಳಂತೂ ಇಲ್ಲ. ಅವರೂ ಸೀತೆಯಂತೆಯೇ ಮೌನವಾಗಿ ಸಾಧ್ಯವಿರುವಷ್ಟು ಕಾಲ ನೋವನ್ನು ನುಂಗಿ ಬಾಳುತ್ತಿದ್ದಾರೆ; ಸಹಿಸಲು ಅಸಾಧ್ಯವಾದಾಗ ಸೀತೆಯಂತೆ ಭೂಮಿಯಲ್ಲಿ ಐಕ್ಯರಾಗದಿದ್ದರೂ ಆತ್ಮಹತ್ಯೆ ಮಾಡಿಕೊಂಡು ಪಂಚಭೂತಗಳಲ್ಲಿ ಲೀನವಾಗುವ ದುರಂತಗಳೂ ಸಂಭವಿಸಿವೆ. ಇಂಥ ಘಟನೆಗಳಿಗೆ ಕಾರಣವಾದ ಸಾಮಾಜಿಕ ಹೊಣೆಗೇಡಿತನ ದೂರಾದಾಗ ಮಾತ್ರ ನಮ್ಮ ದೇಶದ ಇಂದಿನ ಸಹಸ್ರ ಸಹಸ್ರ 'ಸೀತೆ'ಯರು ನೆಮ್ಮದಿಯ ನಿಟ್ಟುಸಿರು ಬಿಟ್ಟಾರು!

**22.11.2012**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑